

## ಕಪ್ಪು ಮಣ್ಣಿನ ಮೂಲ ಶಿಲೆ



ಉತ್ತರಕನ್ನಡ ಜಿಲ್ಲೆಯ ಕೆರೆಯೊಂದರಲ್ಲಿ ಹೂಳು ತೆಗೆಯುವ ವೇಳೆ ಕಪ್ಪು ಮಣ್ಣಿನ ಮೂಲ ಶಿಲೆ ಕಾಣಲು ಸಿಕ್ಕಿತು. ಇದು ಹತ್ತಿ ಬೆಳೆಗೆ ಹೆಸರಾದ ಕಪ್ಪು ಮಣ್ಣಿನ ಮೂಲ ಬಾಸಲ್ಟ್ ಶಿಲೆ. ಜ್ವಾಲಾಮುಖಿಯಿಂದ ಉಂಟಾಗುವ ಈ ಶಿಲೆಯು, ಕಡು ಕಪ್ಪು ಬಣ್ಣ ಅಥವಾ ಬೂದು ಬಣ್ಣದಲ್ಲಿ ಇರುತ್ತದೆ. 'ಜ್ವಾಲಾರಸ ತಣಿದ ಬಳಿಕ ರೂಪುಗೊಳ್ಳುವುದೇ ಈ ಶಿಲೆ' ಎಂಬುದು ಭೂ ವಿಜ್ಞಾನಿಗಳ ಮಾತು.

ಕಪ್ಪು ಮಣ್ಣಿನ ಮೂಲ ಶಿಲೆ ಹೆಚ್ಚಿನ ಪ್ರಮಾಣದಲ್ಲಿ ಹ್ಯೂಮಸ್, ಕಬ್ಬಿಣದ ಅಂಶವನ್ನು ಹೊಂದಿರುತ್ತದೆ. ಇದು ಶಿಲೆಯು ಕಪ್ಪು ಅಥವಾ ಬೂದು ಬಣ್ಣದಲ್ಲಿ ಇರಲು ಕಾರಣವಾಗಿದೆ. ಮೂಲ ಶಿಲೆ ಸುಣ್ಣದ ಅಂಶವನ್ನೂ ಹೊಂದಿರುತ್ತದೆ. ಈ ಶಿಲೆಗಳು ಮೂಲ ನೆಲೆಯಲ್ಲಿ ಕಾಣಸಿಕ್ಕಿದ್ದು ವಿಶಿಷ್ಟ ಅನುಭವ ನೀಡಿತು. ಕೆರೆಯ ಹೂಳು ಫಲವತ್ತಾಗಿದ್ದು, ರೈತರು ಇದನ್ನು ತಮ್ಮ ಹೊಲಕ್ಕೆ ಕೊಂಡೊಯ್ಯುತ್ತಾರೆ. ಜೆಸಿಬಿ ಮೂಲಕ ಹೂಳು ತೆಗೆಯುವಾಗ ಮೂಲ ಶಿಲೆಯ ದರ್ಶನವಾಯಿತು.

–ಅರುಣ್ ಕಿಲ್ಲೂರು

## ಕರಾವಳಿ ಸಂಸ್ಕೃತಿಯ ಕಲಾಕೃತಿ

ಮಂಗಳೂರು ವಿಮಾನ ನಿಲ್ದಾಣದಲ್ಲಿ ಹುಲಿವೇಷಧಾರಿಗಳ ವಿವಿಧ ಭಂಗಿಯ ಕಲಾಕೃತಿ ಮನಸೆಳೆಯುತ್ತದೆ. ಗಣೇಶ ಚತುರ್ಥಿ, ನವರಾತ್ರಿ, ದೀಪಾವಳಿ ಹಬ್ಬಗಳ ಸಮಯ ಕರಾವಳಿಯಲ್ಲಿ ವಿಜೃಂಭಿಸುವ ಹುಲಿ ವೇಷಧಾರಿಗಳ ಕುಣಿತ ಅಲ್ಲಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ.

ಉದ್ಯೋಗನಿಮಿತ್ತ ಪರವೂರಲ್ಲಿ ನೆಲೆಸಿರುವ ಕರಾವಳಿ ಮಂದಿಗೆ, ತವರ ಮಣ್ಣು ಸ್ಪರ್ಶಿಸುತ್ತಲೇ ಮರೆತ ತನ್ನೂರಿನ ಸಾಂಸ್ಕೃತಿಕ ಸೊಗಡನ್ನು ನೆನಪಿಸಿ ಪುಳಕಿತರನ್ನಾಗಿಸುತ್ತದೆ. ಇದೇ ರೋಮಾಂಚನದೊಂದಿಗೆ ಸನಿಹ ಸಾಗಿ ಗಮನಿಸಿದರೆ ಅವಿಭಜಿತ ದಕ್ಷಿಣಕನ್ನಡದ ಪರಂಪರೆ, ಕಸುಬು, ಸಂಸ್ಕೃತಿಯನ್ನು ಸಾರುವ ಇತರ ಚಟುವಟಿಕೆ/ಸಾಧನಗಳಾದ ಕಂಬಳ, ಯಕ್ಷಗಾನ, ಮತ್ಸ್ಯೋದ್ಯಮ, ಕುಕ್ಕುಟ ಕದನ, ಭೂತದೈವದ ಕೋಲ, ದೋಣಿಗಾರಿಕೆ, ಭತ್ತ ಅಳೆಯುವ ಸಾಧನ, ಡೋಲು, ಕಳಸ ಪ್ರತಿಷ್ಠಾಪನೆ ಇತ್ಯಾದಿಗಳ ಪ್ರತಿಕೃತಿಗಳನ್ನೂ ವಿಶಿಷ್ಟ ಲೋಹದ ಬಿಡಿಭಾಗಗಳಿಂದ ನಿರ್ಮಿಸಿದ ಗೋಳದ ಮೇಲ್ಮೈನಲ್ಲಿ ಕಾಣಬಹುದಾಗಿದೆ. ಸ್ಥಳೀಯರಲ್ಲಿ ಧನ್ಯತೆ ಮೂಡಿಸುವುದು ಮಾತ್ರವಲ್ಲದೆ ಊರಿಗೆ ಹೊಸದಾಗಿ ಆಗಮಿಸುವ ಅಪರಿಚಿತ ಪ್ರವಾಸಿಗರಿಗೆ ಸ್ಥಳೀಯ ಸಂಸ್ಕೃತಿ, ನಂಬಿಕೆ, ಕಸುಬು, ಮನರಂಜನೆಗಳ ಪರಿಚಯ ನೀಡಿ ಕುತೂಹಲ ಕೆರಳಿಸುವುದೇ ಸ್ಮಾರಕದ ವಿಶೇಷತೆ!


–ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಆನೆ ಬಂತೊಂದಾನೆ...




ವೇಷಗಳ ಹಬ್ಬ ನವರಾತ್ರಿಯಲ್ಲಿ ಹುಲಿ, ಕರಡಿ, ಸಿಂಹ ಮುಂತಾದ ಛದ್ಮವೇಷಗಳನ್ನು ನೋಡಿ ಮಂಕು ಕವಿದಿದ್ದ ಮನಸ್ಸಿಗೆ ಕಾರ್ಕಳದ ಭೂತ ನರ್ತನ ಕಲಾವಿದ ದಿನೇಶರ ಆನೆ ವೇಷ ಹೊಸತನದಿಂದ ಖುಷಿಕೊಟ್ಟಿತು. 'ಮುಂದೆ ಬಾ, ಹಿಂದೆ ಹೋಗು, ಮಂಡೆ ಅಲ್ಲಾಡಿಸು, ಗಂಟೆ ಬಾರಿಸು' ಎಂಬ ಮಾವುತನ ಆದೇಶಗಳನ್ನು ತಕ್ಷಣ ಪರಿಪಾಲಿಸುವ ಈ ಸಲಗವನ್ನು ನೋಡುವಾಗ 'ಈ ವೇಷ ನೋಡಬೇಡ ಅಮ್ಮಯ್ಯ, ನೀ ಮೋಸ ಹೋಗದಿರು ದಮ್ಮಯ್ಯ' ಎಂಬ ಹಾಡು ನೆನಪಿಗೆ ಬಂತು.

–ವೇಣುಗೋಪಾಲ ಶರ್ಮಾ, ಗುರುವಾಯನಕೆರೆ



## ಕ್ರಿಸ್ತ ಶಕ 1218ರ ರೇಖಾಚಿತ್ರ

ಶಿವಮೊಗ್ಗದ ಸಾಗರ ಸಮೀಪ (8 ಕಿ.ಮೀ. ದೂರದ) ನಾಡಕಲಸಿ ರಾಮೇಶ್ವರ ಮತ್ತು ಮಲ್ಲಿಕಾರ್ಜುನ ದೇಗುಲಗಳು ಕ್ರಿ.ಶ. 1218ರಲ್ಲಿ ಹೊಯ್ಸಳರ ಕಾಲದಲ್ಲಿ ಸ್ಥಾಪಿತವಾಗಿದೆ. ಈ ದೇವಾಲಯದ ಮುಖ ಮಂಟಪದಲ್ಲಿನ ಯಾಂತ್ರೀಕೃತ ಪಾಲಿಶ್ ಮಾಡಿದಂತಿರುವ ಎಲ್ಲ ಸ್ತಂಭಗಳ ಪಟ್ಟಿಗಳಲ್ಲಿ ಎಂಟು ಸಣ್ಣ ಸಣ್ಣ ರೇಖಾ ಚಿತ್ರಗಳು ರಚಿತಗೊಂಡಿವೆ. 4–5 ಅಂಗುಲ ವೃತ್ತದಲ್ಲಿ ದೇವರ, ಯಕ್ಷರ, ಮಹಿಳೆಯರ, ಮೃಗ–ಪಕ್ಷಿಗಳ ಚಿತ್ರಗಳಿವೆ. ಆ ಕಾಲದಲ್ಲೇ ಮಹಿಳೆಯರು ಸಂಗೀತ ಉಪಕರಣ ನುಡಿಸುವಲ್ಲಿ, ಬೇಟೆ, ಯುದ್ಧ, ಕಲೆಯಲ್ಲಿಯೂ ಯಶಸ್ಸು ಸಾಧಿಸಿದ್ದರು ಎಂಬುದರ ಸಾಕ್ಷಿಯಂತಿವೆ ಕಂಬದಲ್ಲಿನ ಕುಸುರಿ ಚಿತ್ರಗಳು.

–ರಾಮಕೃಷ್ಣ ಗೋಖಲೆ, ಕರೇಗಲ್

